ಓ.ಎಸ್ಃ 25/2021 ಡಿ.ಡಬ್ಲೂ - 1-ಗೋವಿಂದರಾಜು

ದಿನಾಂಕಃ 23.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ವಾದಿಯ ಪರ ವಕೀಲರಿಂದಃ**

ನಾನು ಆಡೀಟರ್ ಆಗಿ ಕೆಲಸ ಮಾಡಿದ್ದು, ಈಗ ನಿವೃತ್ತಿ ಹೊಂದಿರುತ್ತೇನೆ. ನನ್ನ ಪ್ರಮಾಣಪತ್ರದಲ್ಲಿ ಆಡೀಟರ್ ನನ್ನ ಉದ್ಯೋಗ ಅಂತ ಬರೆಸಿಲಕ್ಕೆ ತೊಂದರೆ ಇರಲಿಲ್ಲ ಎಂದರೆ ಸರಿ. ದಾವೆಯ ಬಗ್ಗೆ ನನಗೆ ಗೊತ್ತಿರುತ್ತದೆ. ನನ್ನ ತಂದೆಯವರಿಗೆ ಎರಡನೇ ಹೆಂಡತಿ ಇಲ್ಲ. ನಾನು ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನ್ಯಾಯಾಲಯದಲ್ಲಿರುವ ದಾಖಲಾತಿಗಳನ್ನು ತೋರಿಸಲಾಗಿ ಇದಕ್ಕೆ ಉತ್ತರ ಕೊಡದೇ ವಕೀಲರ ಜೊತೆ ವಾಗ್ವಾದಕ್ಕೆ ಇಳಿರದಿರುತ್ತಾರೆ. ಸಾಕ್ಷಿದಾರರ ಪರ ವಕೀಲರು ಹಾಜರಿದ್ದು, ಅವರು ಕೂಡ ಅವರ ಪ್ರಶ್ನೆಗೆ ಉತ್ತರ ಕೊಡಿ ಅಂತ ತಿಳಿಸಿದರು ಕೂಡ ಉತ್ತರ ನೀಡಿರುವುದಿಲ್ಲ.

ಸಾಕ್ಷಿಯು ವಕೀಲರ ಜೊತೆ ವಾಗ್ವಾದ ಮಾಡುತ್ತಾ ನ್ಯಾಯಾಲಯದ ಸಮಯವನ್ನು ಹಾಳು ಮಾಡಿರುತ್ತಾರೆ. ನನ್ನ ಪ್ರಮಾಣಪತ್ರದ 4ನೇ ಪ್ಯಾರಾದಲ್ಲಿ ರಂಗಯ್ಯನವರ ಹೆಂಡತಿ ಮಾದಮ್ಮ ರವರು ಚಾಮಯ್ಯ @ ಕುಳ್ಳಯ್ಯರವರ ಹೆಂಡತಿ ಎಂದು ಸಾಬೀತು ಪಡಿಸಿಸಲು ಯಾವುದಾದರೂ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ಹೇಳುತ್ತಾರೆ.

ನಮ್ಮ ಬಾಬ್ತು ಸರ್ವೇ ನಂ. 590/1 ರಲ್ಲಿ 1 ಎಕರೆ 4 ಗುಂಟೆ ಪೈಕಿ 6 ಗುಂಟೆ ಮತ್ತು ಸರ್ವೇ ನಂ. 257 ರಲ್ಲಿ 8 ಗುಂಟೆ ಜಮೀನನ್ನು ಹಿಂದೆ ನಾವು ಬಾಯಿ ಮಾತಿನ ಮೂಲಕ ರೂ. 1,50,000/- ಗಳಿರೆ ಮಾದಮ್ಮ ಮತ್ತು ಅವರ ಮಕ್ಕಳಿಗೆ ಕ್ರಯಕ್ಕೆ ಕೊಡುವುದಾಗಿ ಒಪ್ಪಿ ಹಣ ಪಡೆದುಕೊಂಡಿದ್ದರ ಬಗ್ಗೆ ದಿನಾಂಕ, ತಿಂಗಳು ವರ್ಷವನ್ನು

ನಮೂದಿಸಿದ್ದೀರಾ ಎಂದರೆ ಇಲ್ಲ ಎಂದು ಹೇಳಿರುತ್ತಾರೆ. ಸ್ವಾಧೀನ ಕೊಟ್ಟಿದ್ದರ ಬಗ್ಗೆ ನನಗೆ ಗೊತ್ತಿಲ್ಲ. ದಾವೆಗೆ ಸಂಬಂದಪಟ್ಟಂತೆ ಮಾದಮ್ಮರವರು ಚಾಮಯ್ಯ ರವರ ಹೆಂಡತಿ ಎನ್ನುವುದಕ್ಕೆ ನಮ್ಮ ಗ್ರಾಮದ ಸಾಕ್ಷಿದಾರರು ಯಾರು ಇಲ್ಲ.

ಚಾಮರಾಜನಗರದ ತಹಶೀಲ್ದಾರರವರ ನ್ಯಾಯಾಲಯದ ಪ್ರಕರಣ ಸಂಃ RRT 1560/2007-08 ದಾಖಲೆಯನ್ನು ನಿಪಿ-10 ಎಂದು ಗುರುತಿಸಲಾಯಿತು.

ತಹಶೀಲ್ದಾರರ ಆದೇಶದಂತೆ ದಿಃ 10.06.2010 ರಂದು ನಾನು ಹಾಜರುಪಡಿಸಿರುವ ಹಕ್ಕು ಖುಲಾಸೆ ಪತ್ರದಲ್ಲಿರುವ ಸ್ವತ್ತು ನೊಂದಣಿ ಆಗಿಲ್ಲದ ಕಾರಣ ವಜಾ ಆಗಿರುತ್ತದ ಎಂದು ನಮೂದು ಇರುತ್ತದೆ ಎಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ., ಚಾಮರಾಜನಗರ.